ಬಂದಿಲ್ಲ. ಆ ಯುವತಿಯ ಹೆಸರು, ಊರು, ಸಾವಿಗೆ ಕಾರಣವೇನು ಅಥವಾ ಆ ವಿದ್ಯಾರ್ಥಿ ಯಾರು? ಎಂಬೆಲ್ಲಾ ಮಾಹಿತಿಗಳು ನನಗೆ ಬರಬೇಕಾಗಿದೆ. ಏಕೆಂದರೆ, ಹೇಳಿಕೆಯಲ್ಲಿ ನಾನೇನಾದರೂ ಕೊಟ್ಟು, ಗೊಂದಲವಾದರೆ, ಇನ್ನೊಂದು ಕಮ್ಯುನಿಟಿ, ಮತ್ತೊಂದು ಕಮ್ಯುನಿಟಿ ಜಗಳವಾಡಿಕೊಂಡು, ವಿಧಾನ ಸೌಧದಿಂದ ಇವರೇ ಪ್ರಚೋದನೆ ಮಾಡಿದರೆಂದು ಬರಬಾರದು. ಮಾಹಿತಿ ನನ್ನ ಗಮನದಲ್ಲಿದೆ. ಎಸ್‌ಪಿ ಮತ್ತು ಡಿಸಿಯವರೊಡನೆ ನಾನು ಮಾತನಾಡಿದ್ದೇನೆ. ಸದ್ಯಕ್ಕೆ ಪರಿಸ್ಥಿತಿಯನ್ನು ಕಂಟ್ರೋಲ್ ಮಾಡುತ್ತಿದ್ದಾರೆ. ಸುಮಾರು ಸಾವಿರಾರು ಜನರು ಅಲ್ಲಿ ನೆರೆದಿದ್ದು, ಅಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿದ್ದು, ಆ ಯುವತಿಯ ಶವವನ್ನು ತೆಗೆಯಲು ಬಿಡುತ್ತಿಲ್ಲ. ಡಿಸಿ, ಎಸ್‌ಪಿ ಮತ್ತು ಅಡಿಷನಲ್ ಡಿಜಿಪಿಯವರನ್ನು ಸ್ಥಳಕ್ಕೆ ನಾನು ಕಳುಹಿಸಿದ್ದು, ಅವರು ಸ್ಥಳಕ್ಕೆ ತಲುಪಿದ್ದಾರೆ. ಅವರು ಮತ್ತು ಸ್ಥಳೀಯ ಶಾಸಕರಾದ ಆತ್ಮಾನಂದರವರು ಕೂಡ ಜನರಿಗೆ ಸಮಜಾಯಿಷಿ ಮಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಮುಖ್ಯಮಂತ್ರಿಗಳನ್ನು ಅಲ್ಲಿಗೆ ಕಳುಹಿಸಿದರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ಅಪ್ಪಣೆಯನ್ನು ಪಡೆದೇ ದೆಲ್ಲಿಗೆ ಹೋಗುತ್ತೇನೆಂದು ಹೇಳಿದರು. ಮತ್ತೆ, ನೀವು ಹೀಗೆ ಹೇಳಿದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಮುಖ್ಯಮಂತ್ರಿಗಳು ಹೋಗಲು ನನ್ನ ಅಪ್ಪಣೆ ಪಡೆಯುತ್ತಾರೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಸದನದಲ್ಲಿ ನಿಮ್ಮ ಅಪ್ಪಣೆ ಎಂದರೆ ಎಲ್ಲರ ಅಪ್ಪಣೆ ಪಡೆಯುವುದು ಎಂದರ್ಥ. ಪರಿಸ್ಥಿತಿ ನಿಯಂತ್ರಿಸುವುದಕ್ಕೆ ನಾನು ಎಲ್ಲ ಪ್ರಯತ್ನಗಳನ್ನೂ ಮಾಡಿದ್ದು, ತಾಜಾ ಮಾಹಿತಿ ಏನಾದರೂ ದೊರೆತರೆ ಅದನ್ನು ಸಭೆಗೆ ತಿಳಿಸುತ್ತೇನೆ.

## 11. ಶಾಸನ ರಚನೆ

*(i) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2000*

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಗೀರ್ ಅಹಮದ್ ಸಿ.ಆರ್. (ಸಾರಿಗೆ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಗೆತ್ತಿಕೊಳ್ಳಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :— ಇದೊಂದು ಸಣ್ಣ ತಿದ್ದುಪಡಿಯನ್ನು ಮೋಟಾರು ವಾಹನ ಕಾಯ್ದೆ 3(ಎ)ರ ಅಡಿಯಲ್ಲಿ ತಂದಿರುತ್ತೇನೆ. ಶೇ. 5ರಷ್ಟು ನಾವು ತೆರಿಗೆಯ ಮೇಲೆ ಸೆಸ್ ಅನ್ನು ವಿಧಿಸುತ್ತಿದ್ದೇವೆ. ಈ ಕಾನೂನು 1995-96ನೇ ಸಾಲಿನಲ್ಲಿ ಚಾಲ್ತಿಯಲ್ಲಿ ಬಂದಿದೆ. ನಮ್ಮ ಬೆಂಗಳೂರು ಮಾಸ್ ರ್ಯಾಪಿಡ್ ಟ್ರಾನ್ಸಿಟ್ ಸಿಸ್ಟಂಗೆ ನಾವು ಈ ಹಣವನ್ನು ವಿನಿಯೋಗ ಮಾಡುತ್ತೇವೆ. ಈ ಹಣವನ್ನು ಇನ್ನೂ ಎರಡು ಸಂಸ್ಥೆಗಳಿಗೆ ವಿನಿಯೋಗ ಮಾಡಲು ಈ ಮಸೂದೆಯನ್ನು ತಂದಿದ್ದೇನೆ. ಇದರಲ್ಲಿ ವಿಶೇಷವೆಂದರೆ, ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಅಂಡ್ ಫೈನಾನ್ಸ್ ಕಾರ್ಪೋರೇಷನ್ ಎಂದು ಹೆಸರಿಟ್ಟಿದ್ದು, ಶೇ. 5ರಷ್ಟು ಸೆಸ್‌ನ ಹಣವನ್ನು ಈ ಸಂಸ್ಥೆ ಹೆಸರಲ್ಲಿ ಉಪಯೋಗಿಸಿಕೊಳ್ಳಲು ಈ ಮಸೂದೆ ತಂದಿದ್ದು, ದಯವಿಟ್ಟು ತಾವೆಲ್ಲರೂ ಇದಕ್ಕೆ ಅಂಗೀಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :— ದುಡ್ಡು ತೆಗೆದುಕೊಳ್ಳುತ್ತೀರಿ, ಇನ್‌ಫ್ರಾಸ್ಟ್ರಕ್ಚರ್ ಯಾವಾಗ ಕೊಡುತ್ತೀರಿ? ಮಾಸ್ ರ್ಯಾಪಿಡ್ ಎಂದು ಹೇಳುತ್ತಿದ್ದೀರಿ. ನಾಲ್ಕು ವರ್ಷಗಳಿಂದ ಪೆಟ್ರೋಲ್ ಮೇಲೆ ಸೆಸ್ ತೆಗೆದುಕೊಳ್ಳುತ್ತಿದ್ದೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಇದಕ್ಕಾಗಿ ನಾವು ಈಗ ಅನೇಕ ಕಡೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಹೆಚ್ಚುಕಡಿಮೆ 40ಕೋಟಿ ರೂಪಾಯಿಗಳನ್ನು ನಾವು ಸಂಗ್ರಹಿಸಿದ್ದೇವೆ. ತಮ್ಮ ಮಾಹಿತಿಗಾಗಿ ಹೇಳುವುದಾದರೆ, 1995-96 ನೇ ಸಾಲಿನಲ್ಲಿ 4 ಕೋಟಿ 75ಲಕ್ಷ ರೂಪಾಯಿ 1996-97ನೇ ಸಾಲಿನಲ್ಲಿ 3 ಕೋಟಿ 60 ಲಕ್ಷ ರೂಪಾಯಿ, 1997-98 ನೇ ಸಾಲಿನಲ್ಲಿ 4 ಕೋಟಿ 64 ಲಕ್ಷ ರೂಪಾಯಿ, 1998-99ನೇ ಸಾಲಿನಲ್ಲಿ 12 ಕೋಟಿ ರೂಪಾಯಿ, 1999-2000ನೇ ಸಾಲಿನಲ್ಲಿ 15 ಕೋಟಿ 17 ಲಕ್ಷ ರೂಪಾಯಿ, ಹೀಗೆ ಒಟ್ಟಾರೆ 5 ಪರ್ಸೆಂಟ್ ಸೆಸ್‌ನಿಂದ ನಮ್ಮಲ್ಲಿ 40,79,58,0081-00 ರೂಪಾಯಿಗಳು ಜಮಾ ಆಗಿದೆ. ನಾವು ಈ ಹಣವನ್ನು ಏನು ಸಂಗ್ರಹಣೆ ಮಾಡಿದ್ದೇವೆ ಇದರಿಂದ ಬೆಂಗಳೂರು ಸಿಟಿ ಕಾರ್ಪೋರೇಷನ್‌ಗೆ ಕೊಡಿಯುವ ನೀರಿಗಾಗಿ, ರಸ್ತೆಗಾಗಿ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಹೀರು ಬಂಡವಾಳವಾಗಿ ಉಪಯೋಗಿಸುತ್ತೇವೆ.

ಶ್ರೀ ಎಸ್. ಸುರೇಶ್‌ಕುಮಾರ್ :— ಈ ಹಣವನ್ನು ನೀವು ಸಂಗ್ರಹಣೆ ಮಾಡಿರುವುದು ನೀರು ಕೊಡುವುದಕ್ಕಲ್ಲ. ಅದು ಇರುವುದು ಇಎಲ್‌ಆರ್‌ಟಿಎಸ್ ಮತ್ತು ಎಂಆರ್‌ಟಿಎಸ್-ಗೆ ಮಾತ್ರ. ನಿಮಗೆ ನೀರಿಗಾಗಿ ಆ ಹಣ ಕೊಡಿ ಎಂದು ಯಾರು ಹೇಳಿದರು?

ಶ್ರೀ ಸಿ.ಆರ್. ಸಗೀರ್ ಅಹಮದ್ :— ಅದರಲ್ಲಿ ಬೇರೆ ಬೇರೆ ಕಾರ್ಯಕ್ರಮಗಳು ಕೂಡ ಇದೆ, ತಮಗೆ ಬೇಕಾದರೆ ದಾಖಲಾತಿ ಕಳುಹಿಸಿಕೊಡುತ್ತೇನೆ. ನಾವು 5 ಪರ್ಸೆಂಟ್ ಏನು ಈ ಸೆಸ್ ಕಲೆಕ್ಟ್ ಮಾಡುತ್ತೇವೆ....

ಶ್ರೀ ಎಸ್. ಸುರೇಶ್‌ಕುಮಾರ್ :— ನೀವು ಆ ಹಣವನ್ನು ಕಲೆಕ್ಟ್ ಮಾಡಿಕೊಳ್ಳುತ್ತೀರಿ. ಅದು ಅಲ್ಲಿಂದ ಪ್ರಾರಂಭವಾಗಿ ಇಲ್ಲಿಗೆ ಬಂದಿದೆ. ಇಲ್ಲಿ ನಮ್ಮ ಪ್ರಶ್ನೆ ಏನೆಂದರೆ, ಯಾವ ಉದ್ದೇಶಕ್ಕೆ ಖರ್ಚು ಮಾಡಬೇಕೆಂದು ನೀವು ಸೆಸ್ ಸಂಗ್ರಹಣೆ ಮಾಡುತ್ತಿದ್ದೀರಿ ಅದನ್ನು ಬಿಟ್ಟು ಬೇರೆಯದಕ್ಕೆ ಖರ್ಚು ಮಾಡುತ್ತೇವೆಂದರೆ ಹೇಗೆ?

ಶ್ರೀ ಸಿ.ಆರ್. ಸಗೀರ್ ಅಹಮದ್ :— ಆ ರೀತಿ ಏನೂ ಇಲ್ಲ ವ್ಯವಸ್ಥಿತವಾದ ಒಂದು ವ್ಯವಸ್ಥೆ ಮಾಡಿಕೊಂಡು ನಾವು ಈ ಸೆಸ್‌ನ್ನು ಉಪಯೋಗಿಸುತ್ತಿರುವುದು.

ಶ್ರೀ ಎಸ್. ಸುರೇಶ್ ಕುಮಾರ್ :— ಇದು ಕೂಡ ವ್ಯವಸ್ಥಿತ ಅಪರಾಧದ ಪಟ್ಟಿಗೆ ಬರುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಏಕೆ ಬರುತ್ತದೆ?

ಶ್ರೀ ಎಸ್. ಸುರೇಶ್ ಕುಮಾರ್ :— ಇದನ್ನು ನೀವು ಇಎಲ್‌ಆರ್‌ಟಿಎಸ್‌ಗೆ ಖರ್ಚು ಮಾಡಬೇಕಾಗಿತ್ತು.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮುಂಚೆ ಆ ರೀತಿಯಾದ ಆಲೋಚನೆಯಿತ್ತು. ಅದಕ್ಕೂ ಹಣ ಮೀಸಲಿಡುವುದರ ಜೊತೆಗೆ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಇದರ ಪ್ರತಿಫಲ ಹಿಂದಿನ ಸಾರಿಗೆ ಸಚಿವರಿಗೆ ಹೋಗುತ್ತಿದೆ. ಏಕೆಂದರೆ, 1995-96ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ಪ್ರಾರಂಭಿಸಿದರು, ತಾವು ಹೇಳಿದ ಹಾಗೆ ಈ ಹಣವನ್ನು ಇಎಲ್‌ಆರ್‌ಟಿಎಸ್-ಗೆ ಖರ್ಚು ಮಾಡಬೇಕು ಎನ್ನುವ ಉದ್ದೇಶವಿತ್ತು. ಆದರೆ, ನಾವು ಈಗ ಏನು ಮಾಡಿದ್ದೇವೆಂದರೆ, ಇದರಲ್ಲಿ ಶೇಕಡ ಇಂತಿಷ್ಟು ಈ ಯೋಜನೆಗೆ ಹೋಗುವುದರ ಜೊತೆಗೆ ಉಳಿದ ಹಣವನ್ನು ಎರಡು-ಮೂರು ಸಮಸ್ಯೆಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಈ ಒಂದು ಸಣ್ಣ ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ :— ಆ ಎರಡು-ಮೂರು ಸಮಸ್ಯೆಗಳಿಗೋ? ಅಥವಾ ಸಂಸ್ಥೆಗಳಿಗೋ?

ಶ್ರೀ ಸಿ.ಆರ್. ಸಗೀರ್ ಅಹಮದ್ :— ಸಂಸ್ಥೆಗಳಿಗಲ್ಲ, ಸಮಸ್ಯೆಗಳಿಗೆಗಾಗಿ ಅದನ್ನು ತಂದದ್ದು. ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ :— ಇಲ್ಲಿ, ಕೇವಲ ದುಡ್ಡನ್ನು ಮಾತ್ರ ಮಸೂಲು ಮಾಡುತ್ತಿದ್ದಾರೆ, ಆದರೆ ಇದು ಯಾವಾಗ ಪ್ರಾರಂಭವಾಗುತ್ತದೆ? ಸಾರ್ವಜನಿಕರೆಲ್ಲರೂ ಕೂಡ ಇದು ಯಾವಾಗ ಆಗುತ್ತದೆಂದು ಕೇಳುತ್ತಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಇದರ ಸಂಪೂರ್ಣ ಸಧ್ಯಯಮಕ್ಕಾಗಿ ನಾವು ಈಗಾಗಲೇ ಒಂದು ಸಮಿತಿಯನ್ನು ರಚಿಸಿದ್ದೇವೆ. ಸರ್ಕಾರಕ್ಕೂ ಕೂಡ ಅದಷ್ಟು ಬೇಗ ಈ ರೈಲ್ ಅನ್ನು ಸಂಚರಿಸುವ ವ್ಯವಸ್ಥೆ ಮಾಡಬೇಕೆನ್ನುವ ಉದ್ದೇಶವಿದೆ. ಇದಕ್ಕೆ ಅಂದಾಜು ವೆಚ್ಚ ಒಂದು ಕಿಲೋಮೀಟರ್ ಇಎಲ್‌ಆರ್‌ಟಿಎಸ್‌ಗೆ ಸುಮಾರು 40 ಕೋಟಿ ರೂಪಾಯಿಗಳು ಬೇಕಾಗುತ್ತದೆ, ಮುಂದೆ ಬೇರೆ ಬೇರೆ ಸಂಸ್ಥೆಗಳಿಂದ ಸಾಲವನ್ನು ಪಡೆದು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದರ ಬಗ್ಗೆ ಸರ್ಕಾರಕ್ಕೆ ವಿಶೇಷವಾದ ಆಸಕ್ತಿ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಮಂಡಿಸಿರುವುದು ನಮ್ಮ ದುರ್ದೈವವೆಂದು ತಿಳಿದುಕೊಂಡಿದ್ದೇನೆ. ಬೆಂಗಳೂರಿನಲ್ಲಿ 15 ವರ್ಷಗಳ ನಂತರ ಎಂ.ಆರ್.ಟಿ.ಎಸ್. ಅನ್ನು ಮಾಡಬೇಕು ಎನ್ನುವ ದೃಷ್ಟಿಯಿಂದಾಗಿ ನಾಗರೀಕರ ಮೇಲೆ 5 ಪರ್ಸೆಂಟ್ ಸೆಸ್ ಹಾಕಿ ಸುಮಾರು 45 ಕೋಟಿ ರೂಪಾಯಿಗಳ ಸಂಗ್ರಹಣೆ ಮಾಡಿರುವುದು; Mass Rapid Transport System becomes part of the Infrastructure Development Corporation. ಇದರಿಂದಾಗಿ ಅದೊಂದು ಟೆಕ್ನಿಕಲ್ ಅಮೆಂಡ್‌ಮೆಂಟ್‌ಗೋಸ್ಕರ ಇದನ್ನು ತಂದಿರುವುದು. ಈ ಮಾತನ್ನು ತಾವು ಹೇಳಲಿಲ್ಲ. ತಾವು ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಆದರೆ ನಾನು ಒತ್ತಾಯ ಮಾಡುವುದೇನೆಂದರೆ, ಈ ಸೆಸ್ ಅನ್ನು ಕೊಡುವುದು ಕೇವಲ ಬೆಂಗಳೂರಿನ ನಾಗರೀಕರು, ಆದರೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಬೆಂಗಳೂರಿನದು ಅಲ್ಲದೇ, ಮೈಸೂರಿನದೂ ಬರುತ್ತದೆ, ಕೋಸ್ಟಲ್ ಪ್ರಾಜೆಕ್ಟ್‌ಗಾಗಿ ಎ.ಡಿ.ಬಿಯಿಂದ ಏನು ತೆಗೆದುಕೊಳ್ಳುತ್ತೀರಿ ಅದು ಕೂಡ ಇದಕ್ಕೆ ಬರುತ್ತದೆ ಬೆಂಗಳೂರಿನ ನಾಗರೀಕರು 5 ಪರ್ಸೆಂಟ್ ಸೆಸ್ ಅನ್ನು ಕೊಟ್ಟಿರುವುದು ಯಾವ ಉದ್ದೇಶಕ್ಕೆ ಎಂದರೆ, ಅಂಡರ್‌ಗ್ರೌಂಡ್ ಅಥವಾ ಇಎಲ್‌ಆರ್ ಟಿಎಸ್‌ಗಾಗಿ ಬೆಂಗಳೂರಿಗೆ ಸುಮಾರು 3 ರಿಂದ 4 ಸಾವಿರ ಕೋಟಿ ರೂಪಾಯಿಗಳು ಇದನ್ನು ಮಾಡುವುದಕ್ಕಾಗಿ ಬೇಕಾಗಿರುತ್ತದೆ. ಆದರೆ ಇದನ್ನು ಮಾಡಲಿಕ್ಕೆ ಆಗಲಿಲ್ಲ. ತಾವು ಮತ್ತೊಂದು ಮಾತು ಹೇಳಿದ್ದಿರಿ; ಅದು ಏಕೆ ಅಲ್ಲಿಗೆ ನಿಂತು ಹೋಗಿದೆ? ತಾವು ಏಕೆ ಹೊಟೇಟ್ ಮಾಡುತ್ತಿದ್ದೀರಿ? I don't know who you are not concentrating on that particular field. ಬ್ರೆಜಿಲ್ ಕುರಿಟೀಬೋನಲ್ಲಿ ವೋಲ್ವೋ ಬಸ್‌ಗಳನ್ನು ಹಾಕಿ ಸಪರೇಟ್ ಸ್ಕಾರಲೆಲ್ ಲೈನ್‌ಗಳನ್ನು ಹಾಕಿ ಬಸ್‌ಗಳನ್ನು ಹಾಕಿದ್ದಾರೆ. ನೀವು ಬೇಕಾದರೆ ಯಾವ ಕಂಪನಿಯ ಬಸ್ ಬೇಕಾದರೂ

ಹಾಕಿ, ಪೋಲ್ಡೋ ಬಸ್ ಹಾಕಬೇಕೆಂದೇನೂ ಇಲ್ಲ, ನೀವು ಹಾಗೂ ನಿಮ್ಮ ಮುಖ್ಯಮಂತ್ರಿಗಳು ಒಂದು ಸಾರಿ ಕಿಲಿಪೀಡೋ-ಗೆ ಹೋಗಿ ನೋಡಿಕೊಂಡು ಬನ್ನಿ, ಈಗಾಗಲೇ ನಿಮ್ಮ ಅಧಿಕಾರಿಗಳು ನೋಡಿಕೊಂಡು ಬಂದಿದ್ದಾರೆ. ಈ ಕೆಲಸವನ್ನು ಪೋಲೀಸ್ ಡಿಪಾರ್ಟ್‌ಮೆಂಟ್‌ನ್ನು ಸಹಾಯ ಸಹಕಾರ ತೆಗೆದುಕೊಂಡು ಮೂರು ತಿಂಗಳಲ್ಲಿ ಮಾಡಬಹುದು. ಎಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಸರ್ಫೇಸ್ ಲೈನ್‌ಗಳನ್ನು ಮಾಡಿ, the speed of the bus improves. ತಮಗೆ ಗೊತ್ತಿರುವಹಾಗೆ ಬೆಂಗಳೂರಿನ ಸುತ್ತಿಯಲ್ಲಿ ಬಿ.ಟಿ.ಎಸ್. ಬಸ್ಸಿನ ವೇಗ 10 ರಿಂದ 11 ಕಿಲೋಮೀಟರ್ ಇದೆ. ನೀವು ಇದನ್ನು ಪೀಕ್ ಹವರ್ಸ್‌ನಲ್ಲಿ 22 ಕಿಲೋಮೀಟರ್ ಮಾಡಿಬಿಟ್ಟರೆ ಈಗಿರತಕ್ಕಂಥಾದ್ದರಲ್ಲಿಯೇ ನೀವು 25 ಲಕ್ಷ ಪ್ರಯಾಣಿಕರನ್ನು ಟ್ರಾನ್ಸ್‌ಪೋರ್ಟ್ ಮಾಡಬಹುದು. ಆದರೆಕಡೆ ನೀವು ಗಮನ ಕೊಡಬೇಕು. ನಾವು ಎರಡು ಮೂರು ವರ್ಷ ಬಹಳ ಪ್ರಾಮಾಣಿಕವಾಗಿ ಸ್ವೀಡನ್ ದೇಶದ ಮೂಲಕ ಮಾಡಿದ್ದೆವು, ಅದು ಎಲ್ಲಿಗೆ ನಿಂತಿದೆ ಎಂಬುದರ ಬಗ್ಗೆ ಇಲ್ಲಿ ನೀವು ವಿವರಣೆ ಕೊಡುವುದು ಬೇಡಾಗಿಲ್ಲ, ತಾವು ಅದರ ಕಡೆ ಹೆಚ್ಚಿನ ಗಮನ ಕೊಡಬೇಕು, ಹೊಟೇಟ್ ಮಾಡಬಾರದು; ಏಕೆಂದರೆ, ಅದು ಬೆಂಗಳೂರಿನ ನಾಗರೀಕರಿಗೆ ಬಹಳ ಉಪಯೋಗವಾಗುತ್ತದೆ. Please don't give up that project. That is number one. Regarding Mass Rapid Transport System, ELRTS if the best. ವಾನ್ಕ ಸಿದ್ಧರಾಮಯ್ಯನವರು ಸಬ್-ಕಮಿಟಿಯ ಅಧ್ಯಕ್ಷರಾಗಿದ್ದರು, ನಾನು, ಮಾನ್ಯ ಭೈರೇಗೌಡರವರು, ಬಿ.ಎಸ್. ಪಾಟೀಲರವರು, ನಾವೆಲ್ಲರೂ ಸೇರಿ ಆ ಬಗ್ಗೆ ಚರ್ಚಿಸಿದ್ದೆವು. ಇಎಲ್‌ಆರ್‌ಟಿಎಸ್ ಅನ್ನು ಬ್ಯಾಂಕಾಕ್, ಮನೀಲಾ, ಕೌಲಾಲಂಪುರದಲ್ಲಿ ಇತ್ತೀಚೆಗೆ ಕಟ್ಟುತ್ತಿದ್ದಾರೆ. ಇವು ಎಲ್ಲಾ ಬಹಳ ಚೆನ್ನಾಗಿ ಇರುತ್ತವೆ. ಎಷ್ಟಾಮಿಕಲ್ಲಾಗಿ ಇವೆಲ್ಲಾ ಆಗುತ್ತದೆ. ನಮ್ಮ ದೇಶದಲ್ಲಿ ಕಲ್ಕತ್ತಾದಲ್ಲಿ ಮಾತ್ರ ಇದೆ, ಸುಮಾರು 6 ಕಿಲೋಮೀಟರ್ ಮೆಟ್ರೋ ಕಟ್ಟಿದ್ದಾರೆ. ಆದರೆ ಅದನ್ನು ಉಪಯೋಗಿಸುತ್ತಿರುವ ರೀತಿ ಸರಿಯಿಲ್ಲ. ಏಕೆಂದರೆ, ತಪ್ಪಾದ ಯೋಜನೆಯಿಂದಾಗಿ ಅದನ್ನು ಜನರು ಉಪಯೋಗಿಸುತ್ತಿಲ್ಲ. ಈ ರೀತಿ ನಮ್ಮಲ್ಲಿ ಆಗಬಾರದು, Planning is wrong. There is one more file. You please dig out that file. ಏನೆಂದರೆ, ಸಿ. ಕುಮಾರ್ ಎನ್ನುವ ಅಧಿಕಾರಿ ಒಬ್ಬರು ಇದ್ದರು. The credit should go to him. ಸ್ಯಾಮ್ಸ್ ವಾಟರ್ ಹೋಗುವ ಬಾರೀ ದೊಡ್ಡ ಡ್ರೈನೇಜ್ ಎರಡು ಅಥವಾ ಮೂರು ಹೋಗುತ್ತವೆ. ಆ ಡ್ರೈನೇಜ್‌ಗಳಲ್ಲಿ ಪಿಲ್ಲರ್ ಹಾಕಿ ಅದರ ಮೇಲೆ ಫ್ಲೈ-ಓವರ್ ಮಾಡಿ ಬಸ್ ಹಾಗೂ ರೈಲ್‌ಗಳನ್ನು ಬಿಟ್ಟರೆ ಸಹಿಯಾಗುತ್ತದೆ. It becomes the easiest thing. ಅದಕ್ಕೋಸ್ಕರ ಆ ದುಡ್ಡನ್ನು ನೀವು ಸಂಗ್ರಹಣೆ ಮಾಡಿರುವುದು. ಬೆಂಗಳೂರಿನಲ್ಲಿ ದುಡ್ಡು ಸಂಗ್ರಹಣೆ ಮಾಡಿ Infrastructure Development Corporation ಗಾಗಿ ನೀವು ಈಗ ಅಮೆಂಡ್‌ಮೆಂಟ್ ಇಲ್ಲಿ ತಂದು, ನಿಮಗೆ ಮೇಜಾರಿಟಿ ಇದೆ ನೀವು ಇದನ್ನು ಪಾಸ್ ಮಾಡಿಕೊಳ್ಳುತ್ತೀರಿ. ಈ ರೀತಿ ಮಾಡಿದರೆ ಬೆಂಗಳೂರಿನ ನಾಗರೀಕರಿಗೆ ಮೋಸ

ಮಾಡಿದ ಬಗ್ಗೆ ಆಕ್ಷೇಪವಿಲ್ಲವೇ? ಈ ಪ್ರಶ್ನೆಯನ್ನು ಬೆಂಗಳೂರಿನ ಶಾಸಕರು ಕೇಳಬೇಕಾಗುತ್ತದೆ. ನೀವು ಈ ದುಡ್ಡನ್ನು ಎಂ.ಆರ್.ಟಿ.ಎಸ್.ಗಾಗಿ ಸಂಗ್ರಹಣೆ ಮಾಡಿರುವುದು, ಅದನ್ನು ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ಗೆ ಕೊಡುತ್ತೀವೆಂದರೆ ಹೇಗೆ? ಇದಕ್ಕೆ ಕಾರಣ ಏನೆಂದರೆ, ನಿಮ್ಮ ಸರ್ಕಾರದಲ್ಲಿ ದುಡ್ಡು ಇಲ್ಲ. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಮಾಡಿ ಅದಕ್ಕೊಬ್ಬ ಮಂತ್ರಿಯನ್ನಾಗಿಸಿ ಮಾನ್ಯ ಜಾನ್ ಅನ್ನುವವರ ಕೊರಳಿಗೆ ಅದನ್ನು ತಗಲುಹಾಕಿ ದುಡ್ಡು ಇಲ್ಲವೆನ್ನುವ ಕಾರಣಕ್ಕೆ ಅಲ್ಲಿಂದ ಅಲ್ಲಿಗೆ ಆ ದುಡ್ಡನ್ನು ವರ್ಗಾವಣೆ ಮಾಡುತ್ತಿದ್ದೀರಿ. ಇದು ಸರಿಯಲ್ಲ. But, the procedure is not correct. ಆ ಎರಡು-ಮೂರು ವಿಚಾರಗಳ ಬಗ್ಗೆ ನಾವು ಗಮನ ಕೊಡಬೇಕೆಂದು ಹೇಳಿ, ಈ ಸಂದರ್ಭವನ್ನು ಉಪಯೋಗಿಸಿಕೊಂಡು ನಾನು ಸಣ್ಣ ಸಲಹೆಗಳನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :— ಮಾನ್ಯ ಅಧ್ಯಕ್ಷರೆ, ಮುಸ್ಲಿಮರು ಇಲ್ಲಿ ಬರುವುದಿಲ್ಲ. ಕಾರಣ ಏನೆಂದರೆ, ಅವರ ಕಾಲದಲ್ಲಿ ಈ ಒಂದು ಸಂಸ್ಥೆಯನ್ನು ಪ್ರಾರಂಭಿಸಬೇಕೆನ್ನುವ ತೀರ್ಮಾನಮಾಡಿರುವುದು. ಮಾನ್ಯ ಸಿಂಧ್ಯಾರವರು ಹಿರಿಯ ಸದಸ್ಯರು, ಅವರಿಗೆ ಈ ಸದನದಲ್ಲಿ ನಡೆಯುವ ಎಲ್ಲಾ ವಿಚಾರಗಳು, ಎಲ್ಲಾ ವಿಷಯಗಳು ಬಹಳ ಉತ್ತಮವಾಗಿ ತಿಳಿದುಕೊಂಡಿದ್ದಾರೆ. ಅದರೆ, ನಾನು ಇದರ ಬಗ್ಗೆ ಬಹಳ ವಿಸ್ತಾರವಾಗಿ ಏಕೆ ಹೇಳಲಿಕ್ಕೆ ಹೋಗಲಿಲ್ಲವೆಂದರೆ, ಇದು ಒಂದು ಸಣ್ಣ ತಿಪ್ಪರ್ಲಾಗದಂತಾಗಿರುವುದರಿಂದ ನಾನು ಹೆಚ್ಚು ಹೇಳಲಿಕ್ಕೆ ಬಯಸಲಿಲ್ಲ. ಮಾನ್ಯ ಸದಸ್ಯರು ಎರಡು ಮೂರು ವಿಚಾರಗಳನ್ನು ಹೇಳಿದರು. ನಾವು ಯಾವ ರೀತಿಯಲ್ಲಿ ಹಿಂದೆ ಸ್ವೀಡನ್‌ಗೆ ಹೋಗಿ ಆ ಸರ್ಕಾರದ ಜೊತೆ ಮಾತುಕತೆ ನಡೆಸಿ ಇದರ ಯಶಸ್ವಿಗಾಗಿ ಏನು ಪ್ರಯತ್ನ ಮಾಡಿದಿರೋ ಅದೇ ಪ್ರಯತ್ನಕ್ಕಾಗಿ ನಾನು ಮತ್ತೊಮ್ಮೆ ಸ್ವೀಡನ್‌ಗೆ ಹೋಗಿದ್ದೆ. ಈ ಪ್ರಯತ್ನದಲ್ಲಿ ನಾವು ಇವತ್ತು ಎಲ್ಲಿಯವರೆಗೆ ಯಶಸ್ವಿಯಾಗಿದ್ದೇವೆಂದರೆ, ಬೆಂಗಳೂರು ನಗರದಲ್ಲಿ ಸುಮಾರು 57 ಕಿಲೋಮೀಟರ್ ಮಾರ್ಗದಲ್ಲಿ ಸಂಚರಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅದರಲ್ಲಿ ವೈಟ್ ಫೀಲ್ಡ್ ಎಂದು ಸುಮಾರು 12 ಕಿಲೋಮೀಟರ್‌ನಲ್ಲಿ ಪೂರ್ಣವಾಗಿ ಸಂಚಾರವನ್ನು ಪ್ರಾರಂಭ ಮಾಡುವುದರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇದೆ. ಇದರ ಜೊತೆಗೆ ಸಚಿವ ಸಂಪುಟಕ್ಕೆ ಈ ವಿಚಾರ ತಂದು ಅಲ್ಲಿ ಒಪ್ಪಿಗೆ ಪಡೆದು ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯುವುದಕ್ಕೆ ಈ ಪ್ರಸ್ತಾವನೆಯನ್ನು ಕಳುಹಿಸಿಕೊಡಲಾಗಿದೆ. ನಿಧಿ ಪಾಲೇ ಕೇಂದ್ರ ಸರ್ಕಾರ ಇದಕ್ಕೆ ಶೇ 50 ಒಪ್ಪಿಗೆ ಕೊಟ್ಟು ಸ್ವೀಡನ್ ದೇಶಕ್ಕೆ ಹೋಗಿ ಮಾತುಕತೆಗಳನ್ನು ಕಳುಹಿಸಿಕೊಟ್ಟಿದೆ. ಮೊದಲನೇ ಹಂತವಾಗಿ ನಾವು ಏನು 12 ಕಿಲೋಮೀಟರ್, ಜಯನಗರದಿಂದ ಶಿವಾಜಿನಗರದವರೆಗೆ ಸುರಂಗ ಬಸ್ ಸಂಚಾರ ವ್ಯವಸ್ಥೆ ಮಾಡುತ್ತೇವೆ. ಇದಕ್ಕೆ ಸುಮಾರು 40 ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಬಹಳ ಆಧುನಿಕವಾದ ರೀತಿಯಲ್ಲಿ ನಾವು ಈ ಕೆಲಸವನ್ನು ಮಾಡಿದ್ದೇವೆ. ಎಂದರೆ, ಮಾಜಿ ಸಾರಿಗೆ ಮಂತ್ರಿಗಳು ಇದರ ಪ್ರಯತ್ನದಲ್ಲಿದ್ದಾರೆ,

ಅವರ ಹಾಗೂ ನಮ್ಮ ಪ್ರಯತ್ನದಿಂದಾಗಿ ಇದರ ಯಸಸ್ಸಿಯ ದಾರಿಯಲ್ಲಿದ್ದೇವೆ, ಅಗತ್ಯವಾಗಿ ಬೇಕಾದ 40 ಕೋಟಿ ರೂಪಾಯಿಗಳನ್ನು ಸ್ವೀಡನ್ ಸಂಸ್ಥೆಗೆ ಕೊಡುವುದರ ಬಗ್ಗೆ ನಾವು ಕೇಳಿಕೊಂಡಿದ್ದೇವೆ. ಉಳಿದ ಮೂರು ಹಂತದ ಈ ಯೋಜನೆಗೆ ಸಾರಿಗೆ ಸಂಸ್ಥೆ ಸ್ವತ: ಈ ಹಣವನ್ನು ಭರಿಸಿ ಉಳಿದ ಭಾಗದಲ್ಲೂ ಕೂಡ ಈ ರೀತಿಯ ಸಂಚಾರ ವ್ಯವಸ್ಥೆ ಮಾಡಬೇಕೆಂದು ನಾವು ವ್ಯವಸ್ಥೆ ಮಾಡಿಕೊಂಡಿದ್ದೇವೆ. ಇದರ ಜೊತೆಗೆ ಇದನ್ನು ನೋಡಿ ಬರಬೇಕು ಎನ್ನುವ ಉದ್ದೇಶದಿಂದ ಮೊನ್ನೆ ನಾನು ಚೆನ್ನೈಗೆ ಹೋಗಿದ್ದೆ. ಅಲ್ಲಿ ಈ ವ್ಯವಸ್ಥೆ ಮಾಡಿರುವುದು ಕೇವಲ 4 ಕಿಲೋಮೀಟರ್ ಮಾತ್ರ. ಇದಕ್ಕೆಷ್ಟು ವೆಚ್ಚವಾಗಿದೆ ಎಂದು ನಾನು ಅಲ್ಲಿನ ಅಧಿಕಾರಿಗಳಲ್ಲಿ ವಿಚಾರಿಸಿದಾಗ, ಸುಮಾರು 160 ಕೋಟಿ ರೂಪಾಯಿಗಳು ವೆಚ್ಚವಾಗಿದೆ ಎಂದರು. ಆದ್ದರಿಂದ, ಈ ದಿಮಸ ಫ್ಲೈ ಮಾರ್ಗಗಳನ್ನು ಮಾಡಬೇಕಾದರೆ ಹೆಚ್ಚಿನ ಹಣ ಬೇಕಾಗುತ್ತದೆ. ಇದಕ್ಕೆ ಸರ್ಕಾರ ಇತರೆ ಸಂಸ್ಥೆಗಳಿಂದ ಸಾಲ ಪಡೆದು ಇದನ್ನು ಮಾಡಬೇಕೆನ್ನುವ ಆಸಕ್ತಿ ಸರ್ಕಾರಕ್ಕೆ ಇದೆ. ಮಾನ್ಯ ಸಿಂಧ್ಯಾರವರು, ಈ ಹಣ ಕೊಡುವುದು ಬೆಂಗಳೂರಿನ ನಾಗರೀಕರು ಮಾತ್ರ, ಇದರ ಬಗ್ಗೆ ಅಲ್ಲಿನ ಶಾಸಕರು ಪ್ರಶ್ನೆ ಕೇಳಬೇಕೆಂದರು. ಬಹುಶಃ ಈ ವಿಚಾರ ನಗರಪಾಲಿಕೆಯ ಸಭೆಗಳಲ್ಲಿ, ಚರ್ಚೆಗೆ ಬಂದಾಗ ಮಾನ್ಯ ಸುರೇಶ್ ಕುಮಾರ್‌ರವರಿಗೆ ಗೊತ್ತಿದೆ ಎಂದು ನಾನಾದರೂ ಭಾವಿಸುತ್ತೇನೆ. ಏಕೆಂದರೆ, ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಬಗ್ಗೆ ನಗರಪಾಲಿಕೆಯ ಮೂಲಕವಾಗಿಯೇ ಹಮ್ಮಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ನಾನೇನು ಮೋಟಾರು ವಾಹನಗಳ ಮೇಲೆ 5 ಪರ್ಸೆಂಟ್ ಸೆಸ್ ಅನ್ನು ವಿಧಿಸುತ್ತಿದ್ದೇವೆ, ಇದು ಹೊಸದಾಗಿ ಮಾಡಿಕೊಳ್ಳುವ ನಿಗಮದಲ್ಲಿ ಇದನ್ನು ವಿನಿಯೋಗಿಸಿಕೊಳ್ಳುವುದಕ್ಕಾಗಿಯೇ ಈ ಮಸೂದೆಯನ್ನು ತಂದಿರುವುದು, ಆದ್ದರಿಂದ ದಯಮಾಡಿ ಎಲ್ಲಾ ಸದಸ್ಯರು ಇದನ್ನು ಒಪ್ಪಿ ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"2000 ದ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರವರೆಗೆ

ಅಧ್ಯಕ್ಷರು :— "ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

``2000ದ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ii) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ವಿಧೇಯಕ, 1997.

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರ್ (ಸಣ್ಣ ಉಳಿತಾಯ ಹಾಗೂ ಮುಜರಾಯಿ ರಾಜ್ಯ ಸಚಿವರು) :— ಅಧ್ಯಕ್ಷರೇ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ ವಿಧೇಯಕ, 1997ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.